<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.98/2023</u>

PW- 04

CW- 15

ಪ್ರ. ಬೋ. ದಿನಾಂಕಃ 29-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಕುಮಾರ್ ಡಿ . |
| ತಂದೆ/ಗಂಡನ ಹೆಸರು | : | ದಾಸಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ | : | ಹರಿಹರ |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಚಾಸಾ-1,12 ಮತ್ತು 14 ರವರು ಗೊತ್ತು. ನಾನು ಕಳೆದ 3 ವರ್ಷಗಳಿಂದ ಜಮೊಟೋ ಕಂಪನಿಯಲ್ಲಿ ಆಹಾರ ಸರಬರಾಜು ಮಾಡುವ ಕೆಲಸ ಮಾಡುತ್ತಿದ್ದೇನೆ. ನಾನು ಹರಿಹರದ ವಾಗೀಶ್ ನಗರದ ಚೆನ್ನಪ್ಪ ಕಾಂಪೌಂಡ್ ನಲ್ಲಿ ವಾಸ ಮಾಡುತ್ತೇನೆ.

ದಿಃ14-05-2023 ರಂದು ರಾತ್ರಿ 09-30 ಗಂಟೆ ಸಮಯದಲ್ಲಿ ಪ್ರಶಾಂತ್ ನಗರದ ಶುಗರ್ ಪ್ಯಾಕ್ಟರ್ ರಸ್ತೆಯಲ್ಲಿ ನನ್ನ ಸ್ನೇಹಿತರಾದ ಹರೀಶ್ ಎನ್ನುವವರ ಮನೆಗೆ ಹೋಗಿದ್ದೆ. ರಾತ್ರಿ 10-15 ಗಂಟೆಗೆ ಸಮಯದಲ್ಲಿ ನಾನು ಶುಗರ್ ಫ್ಯಾಕ್ಟರ್ ಕ್ರಾಸ್ ನಲ್ಲಿ ನನ್ನ ಮನೆಯ ಕಡೆ ಹೋಗುತ್ತಿದ್ದಾಗ, ಸದರಿ ಸ್ಥಳದಲ್ಲಿ ಪಕ್ಕೀರಪ್ಪ ತಮ್ಮನಾದ ಕುಮಾರನ ಬೈಕನ್ನು ಅಡ್ಡ ಹಾಕಿದರು. ಆತನ ಚಿಕ್ಕಮನ ಮಕ್ಕಳಾದ ರಾಜು ಮತ್ತು ಮಾರುತಿ ಎನ್ನುವವರು ಅಡ್ಡ ಹಾಕಿದ್ದಾರೆ. ಅವರುಗಳು ನ್ಯಾಯಾಲಯದ ಮುಂದಿರುವ ಆರೋಪಿಗಳಾಗಿರುತ್ತಾರೆ. ಕುಮಾರನ ಜೊತೆಯಲ್ಲಿ ಆತನ ಹೆಂಡತಿಇದ್ದರು. ಆಗ ರಾಜು ಎನ್ನುವವನು ಯಾಕೋ ಮುಖ ನೋಡುತ್ತಿಯಾ, ಗುರಾಯಿಸುತ್ತೀಯಾ ಎಂದು ಕೈಮುಷ್ಟಿಯಿಂದ ಅತನ ಮುಖಕ್ಕೆ ಹೊಡೆಧ ಮಾರುತಿ ಎನ್ನುವವರು ಕಲ್ಲನ್ನು ತೆಗೆದು ಆತನ ಹೊಟ್ಟೆಗೆ ಹಾಕಿದ ಅದು ಅವನ ಕಾಲಿಗೆ ಬಿತ್ತು . ಆ ಸಮಯದಲ್ಲಿ ನಾನು ಪಕ್ಕೀರಪ್ಪ ನಾಗಾರಾಜು ರವರು ಸೇರಿ ಗಲಾಟೆ

ಬಿಡಿಸಿದ್ದೇವೆ. ಅಲ್ಲಿಂದ ಆರೋಪಿಗಳು ಬೈಕ್‌ನಲ್ಲಿ ಹೋಗಿದ್ದಾರೆ. ಇದರಿಂದ ಕುಮಾರನ ಮುಖಕ್ಕೆಲ್ಲಾ ರಕ್ತ ಗಾಯವಾಗಿತ್ತು. ನಾನು ಪಕ್ಕೀರಪ್ಪ ಯಾಕೆ ಹೊಡೆದರು ಎಂದು ಕುಮಾರನನ್ನು ಕೇಳಿದೆವು ಆತ ದಾವಣಗೆರೆ ಬೀಗರ ಮನೆಗೆ ಕಾರ್ಯಕ್ರಮಕ್ಕೆ ಹೋಗಿದ್ದೆವು ನಾವು ಬೈಕ ನಲ್ಲಿ ಬಾತಿ ಬಸ್ ಸ್ಟಾಪ್ ನಲ್ಲಿ ಹೋಗುತ್ತಿದ್ದಾಗ ಅವರು ಒವರ್ ಟೇಕ್ ಮಾಡಿ, ಹಿಂದಕ್ಕೆ ತಿರುಗಿ ಯಾಕೆ ಗುರಾಯಿಸಿ ನೋಡುತ್ತಿಯಾ ಎಂದು ಹೇಳಿದರು ಆಗ ನನ್ನ ಹೆಂಡತಿ ಗಲಾಟೆ ಮಾಡುವುದು ಬೇಡ , ಸುಮ್ಮನೆ ಹೋಗೋಣ ಎಂದು ಪಿ .ಬಿ ರಸ್ತೆಯ ಮೂಲಕ ಮನೆ ಕಡೆ ಬಂದೆವು, ಆರೋಪಿಗಳು ಶಾರ್ಟಕಟ್ ರಸ್ತೆಯಲ್ಲಿ ಮುಂದೆನೆ ಅಲ್ಲಿಗೆ ಬಂದು , ಹೊಡೆದರು ಎಂದು ತಿಳಿಸಿದ. ಆನಂತರ ಪಕ್ಕಿರಪ್ಪ ಮತ್ತು ಆತನ ಹೆಂಡತಿ ಹಾಗೂ ಕುಮಾರನನ್ನು ಆಟೋದಲ್ಲಿ ನಾವು ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಆಸ್ಪತ್ರೆಗೆ ಹೋದ ನಂತರ ರಾತ್ರಿ 10-50 ಗಂಟೆಗೆ ಕುಮಾರನ ಕೊಲೆ ಆರೋಪಿಗಳು ಮಾಡಿರುತ್ತಾರೆ ಎಂದು ಗೊತ್ತಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-

ಮಾರುತಿ ಎನ್ನುವವನು ಕುಮಾರನನ್ನು ಹಿಡಿದುಕೊಂಡಿದ್ದ, ರಾಜು ಎನ್ನುವವನು ಚಾಕುವಿನಿಂದ ಆತನಿಗೆ ಹಾಕಿದ , ಪಕ್ಕೀರಪ್ಪ ಆತನನ್ನು ಬಿಡಿಸಲು ಹೋದಾಗ ಆತನ ತುಟಿಗೆ ಮತ್ತು ಬೆನ್ನಿಗೆ ಚಾಕುವಿನಿಂದ ಹಾಕಿದ್ದಾನೆ ಎಂದು ಗೊತ್ತಾಯಿತು ಎಂದರೆ ಯಾರು ಯಾರಿಗೆ ಹಾಕಿದ್ದಾರೆ ಎಂದು ಗೊತ್ತಾಗಲಿಲ್ಲ. ಆದರೆ ಈ ರೀತಿ ಅಯಿತು ಎಂದು ತಿಳಿಯಿತು ಎಂದು ನುಡಿದಿದ್ದಾರೆ.

ಪಾಟೀಸವಾಲುಃ ಆರೊಪಿತರ ಪರ ಶ್ರೀ ವಿ ಎಂ ಎನ್ ವಕೀಲರಿಂದ

ನಾನು ಐ ಟಿ ಐ ವರೆಗೂ ವಿದ್ಯಾಭಾಸ ಮಾಡಿರುತ್ತೇನೆ. ಪೊಲೀಸರು ಈ ಪ್ರಕರಣದ ಕುರಿತು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಪೊಲೀಸರಿಗೆ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೆನೆ. ಶುಗರ್ ಫ್ಯಾಕ್ಟರಿಯ ಬಳಿ ಆದ ಘಟನೆಯಾದ ಕೂಡಲೇ ನಾನು ಪೂಲೀಸರಿಗೆ ಯಾವುದೇ ದೂರು ನೀಡಿಲ್ಲ. ನಾನು ಕುಮಾರನಿಗೆ ದಾವಣಗೆರೆಯಿಂದ ಬರಬೇಕಾದಾಗ

ಗಲಾಟೆಯಾಯಿತು ಎಂದು ಹೇಳಿದಾಗ ಆ ಕುರಿತು ಕಂಪ್ಲೇಂಟ್ ಕೊಡಬೇಕಾಗಿತ್ತು ಎಂದು ನಾನು ಹೇಳಿಲ್ಲ. ಪೊಲೀಸರಿಗೆ ತುರ್ತು ಕರೆ ಮಾಡುವ 112 ರ ಬಗ್ಗೆ ನನಗೆ ಗೊತ್ತಿರುತ್ತದೆ. ಗಲಾಟೆಯಾದ ಕೂಡಲೇ ನಾನು ಪೊಲೀಸರಿಗೆ ತುರ್ತು ಕರೆ ಮಾಡಿಲ್ಲ. ಕುಮಾರ್ ಮತ್ತು ಪಕ್ಕೀರಪ್ಪನ ಮನೆ ಬಗ್ಗೆ ನನಗೆ ಗೊತ್ತಿದೆ. ಪಕ್ಕೀರಪ್ಪ ನನಗೆ ಮೊದಲಿನಿಂದಲೂ ಪರಿಚಯ ಇದ್ದಾರೆ. ಸದರಿ ಪಕ್ಕೀರಪ್ಪ ಜಯಶ್ರೀ ಟಾಕೀಸ್ ಮುಂಭಾಗ ಎಗ್‌ರೈಸ್‌ಅಂಗಡಿ ಇಟ್ಟುಕೊಂಡಿದ್ದಾನೆ ಎಂದರೆ ಸರಿ. ಪಕ್ಕೀರಪ್ಪ ನನಗೆ 2-3 ವರ್ಷಗಳಿಂದ ಪರಿಚಯವಿದ್ದಾರೆ. ಪಕ್ಕೀರಪ್ಪನ ಮನೆ ಹರೀಶ್ ರವರ ಮನೆಯಿಂದ ಸುಮಾರು 200 ಮೀಟರ್ ಅಂತರದಲಿರುತ್ತದೆ. ಜಯಶ್ರೀ ಟಾಕೀಸ್ ನ ಹಿಂಭಾಗದಲ್ಲಿ ನನ್ನ ಮನೆ ಇರುತ್ತದೆ. ಜಯಶ್ರೀ ಟಾಕೀಸು ಶುಗರ್ ಪ್ಯಾಕ್ಟರ್ ಕ್ರಾಸ್ ನ ರಸ್ತೆಯಿಂದ 3 ಕಿ.ಮೀ. ದೂರದಲ್ಲಿರುತ್ತದೆ ಎಂದರೆ ಸರಿ. ಪಕ್ಕೀರಪ್ಪ ಎಗ್ ರೈಸ್ ಅಂಗಡಿಯನ್ನು ಮದ್ಯಾಹ್ನ 1-00 ಯಿಂದ ರಾತ್ರಿ 11-30 ವರೆಗೂ ಮಾಡುತ್ತಾನೆ. ವ್ಯಾಪಾರ ಬೇಗ ಆದರೆ ಒಂದೊಂದು ದಿನ ಬೇಗ ಹೋಗುತ್ತಾನೆ. ಸಾಮಾನ್ಯವಾಗಿ ರಾತ್ರಿ 11-00 ಗಂಟೆಯವರೆಗೂ ಸಹ ವ್ಯಾಪಾರ ಮಾಡುತ್ತಾನೆ.

ಘಟನೆಯಾದ ವಾರ ಹೇಳಲು ಆಗುವುದಿಲ್ಲ. ಪಕ್ಕೀರಪ್ಪನ ಮನೆಯ ಅಕ್ಕಪಕ್ಕದಲ್ಲಿ ಯಾರು ವಾಸ ಮಾಡುತ್ತಾರೆ ಎಂದು ಹೇಳಲು ಆಗುವುದಿಲ್ಲ. ಗಲಾಟೆ ನಡೆದಿದೆ ಎನ್ನುವ ಸಂದರ್ಭದಲ್ಲಿ ಸುಮಾರು 15-20 ಜನ ಸೇರಿದ್ದರು. ಅಲ್ಲಿದ್ದವರು ತುರ್ತು ಕರೆ ಮಾಡುವುದಾಗಲೀ,ಅಥವಾ ಗಲಾಟೆ ಬಿಡಿಸಲು ಪ್ರಯತ್ನಪಟ್ಟಿಲ್ಲ. ನಾನು ಬೈಕು ಓಡಿಸುತ್ತೇನೆ. ಓವರ್ ಟೇಕ್ ಮಾಡಿದ ಬೈಕ್ ರವರು ನೇರವಾಗಿ ಹೋಗುತ್ತಾರೆ ಎಂದರೆ ಸರಿ. ರಾತ್ರಿ ಸಂದರ್ಭದಲ್ಲಿ ಸಾಮಾನ್ಯವಾಗಿ ವಾಹನಗಳಿಗೆ ಹೆಡ್ ಲೇಟ್ ಹಾಕುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಹೆಡ್ ಲೈಟ್ ಹಾಕಿದಂತಹ ಸಂದರ್ಭದಲ್ಲಿ ಹೆಡ್ ಲೈಟ್ ಪೋಕಸ್ ಕಣ್ಣಿಗೆ ಬೀಳುವುದರಿಂದ ಗೊತ್ತಾಗುವುದಿಲ್ಲ ಎಂದರೆ ಸಡನ್ ಆಗಿ ಗೊತ್ತಾಗುವುದಿಲ್ಲ ಎಂದು ನುಡಿದಿದ್ದಾರೆ. ಘಟನೆ ಆದ ದಿನವೇ ಹೇಳಿಕೆ ಕೊಟ್ಟಿಲ್ಲ, 16 ನೇ ತಾರೀಖು ಹೇಳಿಕೆ ಕೊಟ್ಟಿದ್ದೇನೆ. ಆರೋಪಿಗಳು ಆಸ್ಪತ್ರೆಯಲ್ಲಿ ಕುಮಾರನನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾರೆ ಗೊತ್ತಾಯಿತು ಎಂದು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಆ ರೀತಿ ಹೇಳಲಿಲ್ಲ ಎಂದು ನುಡಿದಿದ್ದಾರೆ. ನಾನು ಆ ದಿನ ನನ್ನ ಸ್ನೇಹಿತನ ಮನೆಗೆ ಹೋಗಿಯೇ ಇಲ್ಲ ಎನ್ನುವುದು ಸರಿಯಲ್ಲ. ಶುಗರ್ ಪ್ಯಾಕ್ಟರಿಯ ಹತ್ತಿರ ಗಲಾಟೆಯಾಯಿತು, ನಾನು

ಮತ್ತು ಪಕ್ಕೀರಪ್ಪ, ನಾಗರಾಜು ಸೇರಿ ಬಿಡಿಸಿದ್ದೇವೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಕುಮಾರನಿಗೆ ಸೇರಿದ ಸ್ವಂತ ಬೈಕು ಇರುವುದಿಲ್ಲ. ಶುಗರ್ ಫಾಕ್ಟರಿಯ ಹತ್ತಿರ ಗಲಾಟೆಯಾಯಿತು, ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಕುಮಾರನನ್ನು ಕಳುಹಿಸಿದ ಆಟೋ ನಂಬರ್, ಆಟೋದ ಡ್ರೈವರು ನನಗೆ ಗೊತ್ತಿರುವುದಿಲ್ಲ. ರಾತ್ರಿ 10-50 ಕ್ಕೆ ಕುಮಾರನ ಕೊಲೆಯಾಯಿತು ಎಂದು ಗೊತ್ತಾಯಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪಕ್ಕೀರಪ್ಪನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.